ಬಿದನೂರು ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಮಟ್ಕಾ ಆಡುವವರ ಮೇಲೆ ಪ್ರಕರಣಗಳನ್ನು ಈ ಕೆಳಕಂಡಂತೆ ದಾಖಲು ಮಾಡಿ ಕಾನೂನು ರೀತ್ಯಾ ಸೂಕ್ತ ಕ್ರಮ ಕೈಗೊಂಡಿರುತ್ತೆ.

ವರ್ಷ	ಮಟ್ಕಾ		
	ದಾಖಲಾದ ಪ್ರಕರಣಗಳ ಸಂಖ್ಯೆ	ಆರೋಪಿಗಳ ಸಂಖ್ಯೆ	ನ್ಯಾಯಾಲಯ ದಿಂದ ವಿಧಿಸಲಾದ ದಂಡದ ಮೊತ್ತ
2007	8	9	1695/–
2008	3	8	2,800/–
2009	8	12	8,731/–

English version

There are no local persons who are running matka gambling in Gowribidanur Taluk. The sponsorers of matka gambling is from neighbiuring Andhra Pradesh and they operate from there only through cell phone. Necessary action is taken against them as per law. The particulars of cases booked on matka gamblers in Gowribidanur for the last 3 years is given below.

Year	**No.of cases booked**	**No.of accused**	**Amount of penalty imposed by Court Rs.**
2007	8	9	1695/-
2008	3	8	2,800/-
2009	8	12	8,731/-

ಇ) ಈಗಾಗಲೇ ಸಾಕಷ್ಟು ಕ್ರಮವನ್ನು ಕೈಗೊಳ್ಳಲಾಗಿದೆ. ಈ ಹಾವಳಿಯನ್ನು ತಪ್ಪಿಸಲು ಎಲ್ಲಾ ರೀತಿಯ ಬಿಗಿ ಕ್ರಮವನ್ನು ಕೈಗೊಳ್ಳಲಾಗುವುದು.

English version

Adequate action has already been taken. All strict measures will be taken to control this menace.

757 ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಬರುವ ಲೋಕೋಪಯೋಗಿ ಇಲಾಖೆಯ ರಾಜ್ಯ ರಸ್ತೆಗಳು ತೀವ್ರ ರೀತಿಯಲ್ಲಿ ಹದಗೆಟ್ಟಿದ್ದು, ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ನಿಜವಲ್ಲವೇ;

ಆ) ಈ ರಸ್ತೆಗಳ ದುರಸ್ತಿಗೆ 2006–07, 2007–08, 2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಲ್ಪಟ್ಟ ಅನುದಾನ ವೆಷ್ಟು;

ಇ) ಈ ರಸ್ತೆಗಳ ದುರಸ್ತಿ ಕಾಮಗಾರಿಯು ಕಳಪೆ ಮಟ್ಟದಿಂದ ಕೂಡಿದ್ದು, ಮಳೆಗಾಲದಲ್ಲಿ ರಸ್ತೆಗಳು ಹಳ್ಳಗಳು ಬಿದ್ದು ಸಂಚಾರಕ್ಕೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕಳಪೆ ಮಟ್ಟದ ಕಾಮಗಾರಿಯನ್ನು ನಿರ್ಮಿಸಿರುವ ಗುತ್ತಿಗೆದಾರರ ವಿರುದ್ಧ ಜರುಗಿಸುವ ಕ್ರಮವೇನು;

ಉ) ಈ ರಸ್ತೆಗಳನ್ನು ದುರಸ್ತಿಗೊಳಿಸಿ ಸಂಚಾರಕ್ಕೆ ಎಂದಿನಿಂದ ಅನುಕೂಲ ಮಾಡಿಕೊಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಗೌರಿಬಿದನೂರು ತಾಲ್ಲೂಕಿನ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ 122.80 ಕಿ.ಮೀ ಉದ್ದದ ರಾಜ್ಯ ಹೆದ್ದಾರಿ ಹಾಗೂ 158.20 ಕಿ.ಮೀ. ಉದ್ದದ ಜಿಲ್ಲಾ ಮುಖ್ಯ ರಸ್ತೆಗಳಿವೆ.

ಇವುಗಳ ಪೈಕಿ ರಾಜ್ಯ ಹೆದ್ದಾರಿಗಳ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ 42 ಕಿ.ಮೀ. ಹಾಗೂ ಸಿಆರ್‌ಎಫ್ ಯೋಜನೆ ಅಡಿಯಲ್ಲಿ 38 ಕಿ.ಮೀ ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಉಳಿದ 42.80 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಯನ್ನು ಗುಂಡಿ ರಹಿತವನ್ನಾಗಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಆ) 2006–07, 2007–08 ಹಾಗೂ 2008–09ನೇ ಸಾಲಿನ ರಾಜ್ಯ ಹೆದ್ದಾರಿ ನಿರ್ವಹಣೆ ಪ್ಯಾಕೇಜ್ ಅಡಿಯಲ್ಲಿ ಈ ರಸ್ತೆಗಳ ದುರಸ್ತಿಗೆ ರೂ.469.00 ಲಕ್ಷಗಳನ್ನು ಹಾಗೂ 2008–09ನೇ ಸಾಲಿನಲ್ಲಿ ಗುಂಡಿ ಮುಚ್ಚಲು ರೂ.13.70 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಇ) ರಸ್ತೆಗಳ ಮುರುಡಾಂಬರೀಕರಣ/ಗಟ್ಟಿಪಡಿಸುವ ಕಾಮಗಾರಿಗಳನ್ನು ಇತ್ತೀಚಿನ ಸಾಲುಗಳಲ್ಲಿ ಕೈಗೊಂಡಿದ್ದು, ಒಳ್ಳೆಯ ಗುಣಮಟ್ಟವನ್ನು ಹೊಂದಿರುತ್ತವೆ. ಬಹಳ ಹಿಂದೆ ಡಾಂಬರೀಕರಣಗೊಂಡಿರುವ ರಸ್ತೆಗಳಲ್ಲಿ ಅಧಿಕ ಭಾರದ ಹೆಚ್ಚುವರಿ ವಾಹನಗಳ ಓಡಾಟದಿಂದ ಅಲ್ಲಲ್ಲಿ ಗುಂಡಿಗಳು ಬೀಳುತ್ತಿದ್ದು, ಆಯಾಯ ಕಾಲದಲ್ಲಿ ಪೂರ್ವ ಮುಂಗಾರು ನಿರ್ವಹಣೆ ಅಡಿಯಲ್ಲಿ ದುರಸ್ತಿಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಈ) ಯಾವುದೇ ಕಳಪೆ ಮಟ್ಟದ ಕಾಮಗಾರಿಯನ್ನು ನಿರ್ವಹಿಸಲಾಗಿಲ್ಲ ವಾದ್ದರಿಂದ, ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಉ) 2009–10ನೇ ಸಾಲಿನಲ್ಲಿ ಪೂರ್ವ ಮುಂಗಾರು ನಿರ್ವಹಣೆ ಅಡಿ ರೂ.12.28 ಲಕ್ಷ ಅನುದಾನ ಒದಗಿಸಲಾಗಿದ್ದು, ದುರಸ್ತಿ ಕಾಮಗಾರಿಗಳನ್ನು ಕೈಗೊಂಡು, ರಸ್ತೆಗಳಲ್ಲಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

757 Sri Shivashankarareddy N.H. : Hon'ble Minister for Public Works kindly answer to the below question?

a) Is it true that State roads of PWD in Gouribidanur taluk have been severely damaged causing inconvenience for traffic;

b) What is the quantum of grants released during the years 2006-07, 2007-08, 2008-09 for repair of these roads;

c) Whether it has come to the notice of the Government that repair works of these roads are of poor quality, potholes have formed on roads during rainy season causing inconvenience for traffic;

d) If so, what action will be taken against contractors who have done poor quality works;

e) When these roads will be repair making convenience for smooth traffic?

Sri C.M. UDASI (Minister for Public Works) :

a) 122.80 kms long State Highways and 158.20 kms long district main roads are under PWD in Gouribidanur Taluk.

Out of which, 42 kms road has been developed under State Highways Maintenance Package and 38 kms road under CRF Scheme. Remaining 42.80 km State Highway has been enabled for smooth traffic movement by making it pothole free.

b) Rs. 469.00 lakhs has been released under State Highway Maintenance Package for repairs during 2006-07, 2007-08 and 2008-09 and Rs. 13.70 lkahs for pothole filling during 2008-09.

c) Asphalting/Strengthening works of roads having been undertaken during recent years, have good quality standards. Potholes have formed here and there on roads which were asphalted long back due to movement of over loaded heavy vehicles, action has been taken to repair them under Pre-monsoon maintenance there and then.

d) Since no poor quality works have not been done, this question does not arise.

e) Rs. 12.28 lakhs has been provided under Pre-monsoon maintenance during the year 2009-10, roads have been enabled for smooth traffic by undertaking repair works.

642 ಶ್ರೀ ನರೇಂದ್ರ ಬಾಬು ಸಿ.ಎ. (ಮಹಾಲಕ್ಷ್ಮಿ ಲೇಔಟ್) : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಯಾವ ಯಾವ ಬಡಾವಣೆಯನ್ನು ಗುರುತಿಸಲಾಗಿದೆ.

ಇ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಈ) ಬೆಂಗಳೂರು ನಗರಕ್ಕೆ ಶಾಶ್ವತವಾಗಿ ಕುಡಿಯುವ ನೀರನ್ನು ಒದಗಿಸಲು ಯಾವ ಯಾವ ಯೋಜನೆಗಳನ್ನು ಕೈಗೊಳ್ಳಲಾಗಿದೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :

ಅ) ಹೌದು.

ಆ) ಬೆಂಗಳೂರು ನಗರದ ಪೂರ್ವ ಮತ್ತು ಉತ್ತರ ಭಾಗಗಳಲ್ಲಿರುವ ಬಡಾವಣೆಗಳಲ್ಲಿ ನೀರಿನ ಸಮಸ್ಯೆ ಇರುವುದೆಂದು ಗುರುತಿಸಿದೆ.

ಇ) ನೀರಿನ ಸಮಸ್ಯೆಯನ್ನು ಬಗೆಹರಿಸಲು, ಸರಾಸರಿ ಪ್ರತಿದಿನ 80 ದಶಲಕ್ಷ ಲೀಟರ್ ನೀರನ್ನು ಹೆಚ್ಚುವರಿಯಾಗಿ ಪಂಪ್ ಮಾಡಿ ನಗರಕ್ಕೆ ಸರಬರಾಜು ಮಾಡಲಾಗುತ್ತಿದೆ.

ಪಶ್ಚಿಮ ಭಾಗದಲ್ಲಿರುವ ಹೆಗ್ಗನಹಳ್ಳಿ **ಜಲ ಸಂಗ್ರಾಹಗಾರವು** ದಿನಂಪ್ರತಿ ಹೆಚ್ಚುವರಿಯಾಗಿ 2 ದಶ ಲಕ್ಷ ಲೀಟರ್ ನೀರು ಮತ್ತು ಕೇತಮಾರನಹಳ್ಳಿ **ಜಲ ಸಂಗ್ರಾಹಗಾರವು** 8 ದಶ ಲಕ್ಷ ಲೀಟರ್ ನೀರು ನಗರದ ಉತ್ತರ ಭಾಗಕ್ಕೆ ರವಾನಿಸಲಾಗುತ್ತಿದೆ.

ಇದೇ ರೀತಿ ದಕ್ಷಿಣ ಭಾಗದಿಂದ ಪೂರ್ವ ಭಾಗಕ್ಕೆ ಹೈಗ್ರೌಂಡ್ಸ್ ಮೂಲಕ ಹೆಚ್ಚುವರಿಯಾಗಿ ದಿನಂಪ್ರತಿ 10 ದಶ ಲಕ್ಷ ಲೀಟರ್ ರವಾನಿಸ-ಲಾಗುತ್ತಿದೆ.